# <u>ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ , ಕಾರವಾರ</u>

ಓ.ಎಸ್ ನಂ. 2/2015 ಪಿ.ಡಬ್ಲ್ಯೂಃ2

ಹೆಸರುಃ ಆನಂದ ನಾಗಪ್ಪ ಬಂಟ್

ತಂದೆ ಹೆಸರುಃ ನಾಗಪ್ಪ ಬಂಡ್

ವಯಸ್ಸುಃ 55 ವರ್ಷ

ಉದ್ಯೋಗಃ ಪರ್ಯಾಯ ವಿಕ್ಷಕರು, ಭೂದಾಖಲೆಗಳ ಉಪನಿರ್ದೇಶಕರ ಕಚೇರಿ ಕಾರವಾರ

ವಾಸಃ ಕಾರವಾರ

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 27-09-2023 ರಂದು ಬೊಧಿಸಲಾಯಿತು.

<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಸ್ ವೈ ಎಸ್ ನ್ಯಾಯವಾದಿರವರಿಂದಃ</u>

ನಾನು ಪ್ರಸ್ತುತ ಭೂದಾಖಲೆಗಳ ಉಪನಿರ್ದೇಶಕರ ಕಚೇರಿ ಕಾರವಾರದಲ್ಲಿ ಸರ್ವೆ ಸುಪರ್ ವೈಸರ್ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೆನೆ.

ನಾನು ಸರ್ವೆ ಇಲಾಖೆಗೆ 1996 ರಲ್ಲಿ ಸರ್ವೆಯರ್ ಎಂದು ಕೆಲಸಕ್ಕೆ ಸೇರಿರುತ್ತೇನೆ. ಒರ್ವ ಸಂತೋಷ ಲಕ್ಷ್ಮ ಣ ರಾಯ್ಕರ ಅಂದರೆ ಈ ದಾವೆಯ ವಾದಿಯರು ದಿಃ 12-08-2016 ರಂದು ತಮ್ಮ ಮಾಲ್ಕಿ ಜಮೀನಿನ ಹದ್ದುಬಸ್ತ ಮಾಡುವಂತೆ ತಹಶೀಲ್ದಾರ ಕಾರವಾರ ಇವರ ಕಚೇರಿಗೆ ಅರ್ಜಿಯನ್ನು ಸಲ್ಲಿಸಿದ್ದು, ಆ ಸಮಯದಲ್ಲಿ ನಾನು ಸರ್ವೆಯರ್ ಎಂದು ಎಡಿಎಲ್ ಆರ್ ಕರ್ತವ್ಯ ನಿರ್ವಹಿಸುತ್ತಿದ್ದು, ನನ್ನ ಮೇಲಾಧಿಕಾರಿಗಳ ಆದೇಶದಂತೆ ಸದರಿ ಅರ್ಜಿದಾರರ ಮಾಲೀಕತ್ವ ಬಾಡ-II ಗ್ರಾಮದಲ್ಲಿನ ಸರ್ವೆ ನಂ. 629/2 ಸಿ ಮತ್ತು ಸರ್ವೆ ನಂ. 629/2 ಬ 1 ಜಮೀನಿನ ಅಳತೆ ಸಂಬಂದವಾಗಿ ಸದರಿ ಜಮೀನಿಗೆ ತೆರಳಿರುತ್ತೇನೆ. ಸರ್ವೆ ಕಾರ್ಯ/ಹದ್ದುಬಸ್ತ ಮಾಡುವ ಪೂರ್ವದಲ್ಲಿ ಅಕ್ಕಪಕ್ಕದ ನಾಲ್ಕು ದಿಕ್ಕಿನ ಜಮೀನುಗಳ ಮಾಲೀಕರಿಗೆ ನೋಂದಾಯಿತ ಅಂಚೆ ಮೂಲಕ ನೋಟೀಸ ಜಾರಿ ಮಾಡಿದ್ದು, ಅದನ್ನು ಅವರು ಸ್ವೀಕರಿಸಿರುತ್ತಾರೆ. ನಂತರ ನಾನು ಸದರಿ ವಾದಿಯ ಮಾಲೀಕತ್ವದ ಆಸ್ತಿಗಳನ್ನು ಅವರ ಅರ್ಜಿಯಂತೆ ಹದ್ದಬಸ್ತ ಮಾಡಿ, ನನ್ನ ಕಚೇರಿಗೆ ವರದಿಯನ್ನು ಸಲ್ಲಿಸಿರುತ್ತೇನೆ. ಹದ್ದುಬಸ್ತ ಮಾಡುವ ಸಮಯಕ್ಕೆ ಅಕ್ಕಪಕ್ಕದ ಜಮೀನಿನ ಮಾಲೀಕರು ಸಹ ಹಾಜರಿದ್ದರು.

ಹದ್ದುಬಸ್ತನ್ನು ಮಾಡುವ ಪೂರ್ವದಲ್ಲಿ ಒಂದು ನಿರ್ದಿಷ್ಟ ಗಡಿಕ 8 ಲ್ಲಿನಿಂದ ಅಳತೆಯನ್ನು ಸರ್ವೆ ನಿಯಾಮವಳಿಯಂತೆ ಪ್ರಾರಂಬಿಸಿರುತ್ತೇನೆ. ನಂತರ ಹಕ್ಕುದಾರರ ಜಮೀನನ್ನು ಅಳತೆ ಮಾಡುವ ಸಮಯಕ್ಕೆ ಒರ್ವ ಸಂದೀಪ ರಮಾನಂದ ಗೋಕರ್ಣಕರ್ ಇವರು ಸದರಿ ಅರ್ಜಿದಾರನ ಆಸ್ತಿಯ ಪೂರ್ವ ದಿಕ್ಕಿನಲ್ಲಿ 2 ಆಣೆ ವಿಸ್ತೀರ್ಣದ ಜಮೀನು ಅತಿಕ್ರಮಣ

ಮಾಡಿರುವುದು ನನಗೆ ಕಂಡುಬಂದಿರುತ್ತದೆ. ಸದರಿ ಅತಿಕ್ರಮಣವು ಅರ್ಜಿದಾರ ಸಂತೋಷ ಲಕ್ಷ್ಮಣ ರಾಯ್ಕರ ಇವರಿಗೆ ಸೇರಿದ ಜಮೀನು ಸರ್ವೆ ನಂ. 629/2ಬ 1ರಲ್ಲಿ ಕಂಡುಬಂದಿರುತ್ತದೆ. ನಂತರ ಈ ಬಗ್ಗೆ ನಾನು ವರದಿಯನ್ನು ನನ್ನ ಕಚೇರಿಗೆ ಸಲ್ಲಿಸಿರುತ್ತೇನೆ.

ಸಾಕ್ಷಿಯು ಸದರಿ ವಾದಿಯು ಹದ್ದಬಸ್ತಗೆ ಸಲ್ಲಿಸಿದ ಅರ್ಜಿ ಮತ್ತು ವರದಿಯನ್ನು ತಮ್ಮ ಕಚೇರಿಯಿಂದ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಸಾಕ್ಷಿಯ ಸದರಿ ಹದ್ದುಬಸ್ತ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ–15 ಎಂದು, ಜವಾಬನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ–16 ಎಂದು, ನೋಟೀಸನ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ–17 ಎಂದು, ನಕಾಶೆಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ–18 ಎಂದು, ಪಿಟಿ ಶೀಟ್ ನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ–19 ಎಂದು ಗುರುತಿಸಲಾಯಿತು. ಸರ್ವೆ ನಂ. 629/2ಬ 1 ಕ್ಕೆ ಸಂಬಂದಪಟ್ಟಂತೆ ವಾದಿಯ ಅರ್ಜಿ, ನೋಟೀಸ, ಜವಾಬು, ನಕಾಶೆ ಹಾಗೂ ಪಿಟಿ ಶೀಟ್ ಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ–20 ರಿಂದ ನಿ.ಪಿ–24 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಕೆ ಆರ್ ಡಿ ನ್ಯಾಯವಾದಿರವರಿಂದಃ

ಸರ್ವೆ ನಂ. 629/1 ಕ್ಕೆ ಸಂಬಂದಿಂದ ಮೂಲ ಸರ್ವೆ ನಂಬರನ ಮೂಲ ವಿಸ್ತೀರ್ಣ ಎಷ್ಟು ಎಂಬುದು ನನಗೆ ಗೊತ್ತಿರುವುದಿಲ್ಲ. ಸದರಿ ಸರ್ವೆ ನಂಬರ ವಿಭಜನೆ ಆಗಿ ಸರ್ವೆ ಆದ ನಂತರ ಯಾರು ಯಾರಿಗೆ ಎಷ್ಟು ಎಷ್ಟು ಕ್ಷೇತ್ರ ಬಂದಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನಾನು ಸರ್ವೆ ಕಾರ್ಯ ಮಾಡುವ ಕಾಲಕ್ಕೆ ಮೂಲ ಸರ್ವೆ ನಂಬರ 629/1 ಕ್ಕೆ ಸಂಬಂದಪಟ್ಟ ಎಲ್ಲಾ ಹಿಸ್ಸಾದಾರರ ಹೆಸರುಗಳನ್ನು ಹಾಗೂ ಅವರಿಗೆ ಎಷ್ಟು ಕ್ಷೇತ್ರದ ಜಮೀನುಗಳು ಇರುತ್ತದೆ ಎಂದು ತಿಳಿದುಕೊಂಡಿರುವುದಿಲ್ಲ. ಸರ್ವೆ ಮಾಡುವ ಕಾಲಕ್ಕೆ ಸರ್ವೆ ನಂ 629/1 ರಲ್ಲಿ ಒಟ್ಟು ಎಷ್ಟು ಹಿಸ್ಸೆಗಳು ಇರುತ್ತದೆ ಎಂದು ನಾನು ದಾಖಲೆಗಳ ಮೂಲಕ ನೋಡಿ ತಿಳಿದುಕೊಂಡಿರುತ್ತೇನೆ. ನಾನು ಸರ್ವೆ ಮಾಡುವಾಗ, ಎಷ್ಟು ಹಿಸ್ಸೆಗಳು ಅದರಲ್ಲಿ ಇತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ಪಿಟಿ ಶೀಟ್ ನಲ್ಲಿ ಇರುತ್ತದೆ ನನಗೆ ಹೇಳಲು ಬರುವುದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ಸರ್ವೆ ಮಾಡುವ ಪೂರ್ವದಲ್ಲಿ ಸದರಿ ಸರ್ವೆ ನಂಬರ್ ನ ಪ್ರತಿಯೊಂದು ಹಿಸ್ಸೆಯ ಮಾಲೀಕರು ಯಾರು ಎಂದು ಅವರ ಮಾಲೀಕತ್ವದ ಜಮೀನಿನ ಕ್ಷೇತ್ರ ತಿಳಿದುಕೊಂಡಿರುವುದಿಲ್ಲ. ಅತಿಕ್ರಮಣವನ್ನು ಕಂಡುಹಿಡಿಯ ಬೇಕಾದಲ್ಲಿ ಅರ್ಜಿದಾರರ ಸರ್ವೆ ನಂಬರಗೆ ಸಂಬಂದಪಟ್ಟ ಉಳಿದ ಎಲ್ಲಾ ಹಿಸ್ಸೆಗಳನ್ನು ಸರ್ವೆ ಮಾಡಬೇಕು ಎಂದರೆ ಸಾಕ್ಷಿಯು ನಾವು ಅರ್ಜಿದಾರರ ಜಮೀನನ್ನು ಮಾತ್ರ ಸರ್ವೆ ಮಾಡುತ್ತೇವೆ ಉಳಿದ ಜಮೀನನ್ನು



ಮಾಡುವುದಿಲ್ಲ ಹಾಗೂ ಈ ಪ್ರಕರಣದಲ್ಲಿ ನಿ.ಪಿ–24 ರ ಪ್ರಕಾರ ಕೇವಲ ಅರ್ಜಿದಾರನ ಜಮೀನನ್ನು ಮಾತ್ರ ಸರ್ವೆ ಮಾಡಿರುತ್ತೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ಹಾಜರುಪಡಿಸಿದ ನಿ.ಪಿ–24 ನಕಾಶೆಯಲ್ಲಿ ಪ್ರತಿವಾದಿಗೆ ಸಂಬಂದಪಟ್ಟ ಸ್ಥಳದಲ್ಲಿ 2 ಗುಂಟೆ 2 ಆಣೆ ವಿಸ್ತೀರ್ಣದ ಜಮೀನು ಇರಬೇಕು ಎಂದು ನಕಾಶೆಯಲ್ಲಿ ಕಾಣಿಸಬೇಕಾಗುತ್ತದೆ ಎಂದರೆ ಸರಿ. ಸದರಿ ನಿ.ಪಿ–24 ರಲ್ಲಿ 2 ಆಣೆ ಜಮೀನನ್ನು ಹೊರತುಪಡಿಸಿ

ಪ್ರತಿವಾದಿಯರ ಹೆಸರಿನಲ್ಲಿ ಇರತಕ್ಕಂತಹ ಎರಡು ಗುಂಟೆ ಜಮೀನನ್ನು ಕಾಣಿಸಿರುವುದಿಲ್ಲ ಎಂದರೆ ಸರಿ . ನಾನು ಸರ್ವೆ ಮಾಡುವ ಸಮಯದಲ್ಲಿ ನಿ.ಪಿ–24 ನಕಾಶೆಯಲ್ಲಿ ಪ್ರೈವಾಟ ರಣಗಳನ್ನು ತೋರಿಸಿ ಸರ್ವೆ ಮಾಡಿರುತ್ತೇನೆ ಎಂದರೆ ಸರಿ ಮತ್ತು ಅಲ್ಲಿ ಕಾನೂನು ಬದ್ದ ಹದಬಸ್ತ ಗಡಿಕಲ್ಲುಗಳು ಇರುವುದಿಲ್ಲ ಎಂದರೆ ಸರಿ. ಪ್ರೈವಾಟ ರಣಗಳ ಆಧಾರದ ಮೇಲೆ ಸರ್ವೆ ಕಾರ್ಯವನ್ನು ಮಾಡಿ ಯಾವುದೇ ಅತಿಕ್ರಮಣವನ್ನು ಕಂಡುಹಿಡಿಯಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಕಾನೂನು ಬಾಹಿರವಾಗಿ ವಾದಿಯರು ನಗರಸಭೆ ಬೈಲಾ ಉಲ್ಲಂಘನೆ ಮಾಡಿ ಕಟ್ಟಿದ ಕಟ್ಟಡವನ್ನು ಉಳಿಸುವ ಉದ್ದೇಶದಿಂದ ಒಂದು ಸುಳ್ಳು ನಕ್ಷೆಯನ್ನು ಅವರಿಗೆ ಅನುಕೂಲವಾಗುವಂತೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ–24 ನಕಾಶೆಯಲ್ಲಿ ಖಾಯಂ ರಣಗಳು ಅಂದರೆ ಮೂಲ ಗಡಿಕಲ್ಲುಗಳನ್ನು ಕಾಣಿಸಿರುವುದಿಲ್ಲ ಎಂದರೆ ಸರಿ.

ಈ ಹಂತದಲ್ಲಿ ಪ್ರತಿವಾದಿ ಪರ ನ್ಯಾಯಾವಾದಿರವರು ಮುಂದುವರೆದ ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ  ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ .**
**ಸಿವಿಲ್ ನ್ಯಾಯಾಧೀಶರು ಕಾರವಾರ**